ಮೈಸೂರ ಗೆಜೆಟ್ಟ.

ನಂ. 33 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1885.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 15, ಸನ್ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಪೆರೇಯಿಲ್‌ನೆ, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬ್‌ಆರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಷಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷನ್‌ಗಳು.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ದಿವಾನರವರಿಂದ ಕೊಡೋಷಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 11ನೇ ಜುಲೈ 1885.

ಕ್ಯಾಂಪ್ ನಂ. 773.—ಕಡೂರು ತಾಲ್ಲೂಕಿನಲ್ಲಿರುವ ಈಸುವನಹಳ್ಳಿ ಗ್ರಾಮವು ಜಾಲ್ತಿ ಸರಕಾರಸುಲ್ ಲಾಗಾಯತು, ಆರಸೀಕೆರೆ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತೆ.

ತಾರೀಖು 17ನೇ ಜುಲೈ 1885.

ನಂ. 73.—ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು ಮಂಜೂರ್ಮಾಡಲ್ಪಟ್ಟಿದೆ:—

ತಿಪ್ಪಗೊಂಡನಹಳ್ಳಿ ತಾಲ್ಲೂಕಿನಿಂದ ಕೋಲಾರ ತಾಲ್ಲೂಕಿಗೆ.

1 ಕಾಡಹಳ್ಳಿ | 2 ಗುರುಪನಾಟ

ತಾರೀಖು 16ನೇ ಜುಲೈ 1885.

ನಂ. 75.—ಸ॥ 1879ನೇ ಇನವಿಯ ಇಂಡಿಯ್ ಸ್ಟ್ಯಾಂಪ್ ಆಕ್ಟಿನ 8ನೇ ಸೆಕ್ಷನ್‌ನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಶ್ರೀಮ೯ ಮಹಾರಾಜಾ ಸರ್ಕಾರವರು ಹುಕ್ಕುಂ ಮಾಡುವದೇನಂದರೆ, ಬಂದು ಫಸಲಿನ ಯಾವ ಆಧಾರದ ಮೇಲಾಗಲಿ ಕೊಡಲ್ಪಟ್ಟ ಸೂಲವು ವಾಪಸು ಮಾಡುವ ಬಗ್ಗೆ ಹುಟ್ಟಿದ ಬಂದು ಬಡಂಬಡಿಕೆ ದಸ್ತಾವೇಜಿನ ಮೇಲೆ ವಸೂಲ್ಮಾಡಲ್ಪಡಬೇಕಾದ ಸ್ಟ್ಯಾಂಪು ಡ್ಯೂಟಿಯು, ಸದರೀ ಫಸಲು ಆಧಾರ ಕಾಲದಲ್ಲಿ ಇದ್ದಾಗ್ಯು ಅಥವಾ ಇಲ್ಲದಿದ್ದಾಗ್ಯೂ ಸರಿಯೆ, ಸದರೀ ಆಕ್ಟಿನ 1ನೇ ಪೆಡ್ಯೂಲಿನ 29ನೇ ಆರ್ಟಿಕಲ್ಲಿನ (a) ಅಥವಾ (b) ಕ್ಲಾಜಿನಲ್ಲಿ ನಮೂದುಮಾಡಲ್ಪಟ್ಟ ಕಾಲದವಳಗಾಗಿ ಸದರೀ ಸೂಲವು ಪಾವತೀ ಮಾಡಲ್ಪಡುವದಾದ ಪಕ್ಷದಲ್ಲಿ, ಸದರೀ ಆರ್ಟಿಕಲ್ಲಿನ ಸಂಬರ್ಧಾನುಸಾರ (a) ಯಾ (b) ಕ್ಲಾಜು ಅನುಸರಿಸಿ ವಸೂಲ್ಮಾಡಲ್ಪಡಬೇಕಾದ ಡ್ಯೂಟಿಯನ್ನು ವಿಾರಕೂಡದು.

ತಾರೀಖು 22ನೇ ಜುಲೈ 1885.

ನಂ. 83.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಜೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಲುವಾನಕ್ಕೋಸ್ಕರ ಕ್ರಮಪ್ರಕಾರ ಜಪ್ತಿಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಜೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು, ಮತ್ತು ಸದರೀ ತಾರೀಖುಗಳಲ್ಲಿ ದೆಗ್ಗೆ 11 ಘಂಟೆಗೆ ಹರಾಜು ಶುರುವಾಗಿ, ಉಳಿಕೆಯೂವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವವು.

2. ಪರಂತು ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು, ತಮ್ಮ ದುಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕೆಡಾ 25ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಫ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ ಬಡ್ಡೀ ವ ಇತರ ಖರ್ಚುಗಳು ದೇವೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಸ್ಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತ ಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮಗಳು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬಿಜವರೀ ವಿಷಯದಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲಿನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಜಿಲ್ಲೆಯ ತಾಲ್ಲೂಕಿನ ಹೋಬಳಿ.		ಗ್ರಾಮಗಳು.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳಿಯ ಯಾ ಪಟ್ಟಿ.	ಸಾಲಿಯೂನಾ ಸರಕಾರಕ್ಕೆ ಕೊಡಬೇಕಾದ ಪೈಪರಿಂಷ.	ಯಾವ ಬಾಕೀಗ್ರೋ ಸ್ವಕ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
				ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ಬೆಂಗಳೂರು.	ಜೋಡಿಬಾಗಲೇಟಿ	ಕುಳ್ಳಪ್ಪ ವೈರ ಪ್ಪ, ಹೈಪಷ್ಣರಾ ಪ್ಪ, ಇತರ ಇಬ್ಬರು	41 17 12	252 1 2	246 8 0	497 7 11	1885ನೇ ಇಸವಿ ಆಗಸ್ಟ್ 28ನೇ ಮಂಗಳವಾರ ಬೆಂಗಳೂರು ತಾಲ್ಲೂಕು ಕಚೇರಿಯೊಳಗೆ ಅಮಲದಾರ್ರ ರೂಬರು.
		ಜೋಡಿ ದಾಸನಾಯಕನಹಳ್ಳಿ	ಮಾದೇಸಹಳ್ಳಿ ದಿವಾಕರಪ್ಪ, ಇತರ 50ಮಂದಿ	28 18 11½	56 0 0	51 4 0	211 15 3	ಡಿಟೋ 29ನೇ ಡಿಟೋ.

ತಾರೀಖು 29ನೇ ಜುಲೈ 1885.

ನಂ. 89.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೊಸ್ಕರ ಕ್ರಮ ಪ್ರಕಾರ ಜಪ್ತ್ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು, ಮತ್ತು ಸದರೀ ತಾರೀಖಿನಲ್ಲಿ ಬೆಗ್ಗೆ 11 ಘಂಟೆಗೆ ಹರಾಜು ಸುರುವಾಗಿ, ಉಳಿಕೆಯೂವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀಜ್ಞ ಆಫೀಸರರು ತಮ್ಮ ಯಜ್ಞ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲವಲ್ಲಿ ಕ್ರಯದ ಮೊಬಲಗ್ ಪೈಕೀ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಜೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ, ಜಮೀನು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳೆ ಹರಾಜು ಹಾಕಲ್ಪಡುವದು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಇಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇವೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮ್ಮಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಖಾವತೀ ಪಾಸಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜ್ ಆಫೀಸರರಿಂದ ರಿಜು ಮೊಹರ್ ಮಾಡ್ಕೋಣಾವ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೇಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ಕಾಯಮಾದ ದಿನ 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲನಲ್ಲಿ ಆ . ಅಯ್ಯರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ತಿಪ್ಪಸ್ತು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾಜೇ ಬೇರೀಜು.	ನೂಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವನ್ನು ಹರಾಜ್ ಮಾಡಲ್ಪಡುತ್ತೊ ಅಂಥಾ ಸರಕಾರದ ಕಂದಾಯದ ಬಾಕಿ.				ಹರಾಜು ಖರೀದು ಮಾಡಿದ ವ್ಯಕ್ತಿಯ ಹೆಸರು.
ಈಜೂರು–ಚಾಮನ ಸಬ್ ಡಿವೀಜ್.	ಪಟ್ಟಣೂರು.	ಅರಕಲ್ಲು.			ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ.	ಆ.	ಪೈ.	
			ಜೋಡಿ ಹುಲ್ಲಗೋಡೆ	ಬಂಡಪ್ಪಯ್ಯ, ಇತರ 13ಮಂದಿ	288 14 0	452 8 0	153 12 0	20	11	4	1879—80
								70	4	4	1880—81
								8	11	3	1881—82
								3	7	6	1882—83
								209	12	7	1883—84
								153	12	0	1884—85
								4	15	4	ಬಾಂದಲಾಗವ ಪು.
								471	10	4	

1885ನೇ ಇಸವಿ ಜನವರಿ ತಾರೀಖು ಸಂಜೆ ವರುಷಂ ಒಳಗೆ ಪಟ್ಟಣೂರು ಅಮಲ್‌ದಾರರಿಂದ ಕಚೇರಿಯಲ್ಲಿಗೆ ಹಣವು ಜಮಾ ಆಗಬೇಕಾಗಿರುತ್ತೆ.

ಈ ಗ್ರಾಮದ ಬೇರಿಜು ಮಾಜಿ ದರದ ಪ್ರಕಾರ ಇದೆ.

ತಾರೀಖು 31ನೇ ಜುಲೈ 1885.

ನಂ. 92.—ಸನ್ 1881ನೇ ಇಸವಿ ಸೆಪ್ಟಂಬರ್ 10ನೇ ಮತ್ತು ಮಿನ ಮೈಸೂರು ಗೆಜೆಟ್ಟಿನ 146ನೇ ಪುಟದಲ್ಲಿ ಪ್ರಾಯಿಷಾದ 1881ನೇ ಇಸವಿ ಸೆಪ್ಟಂಬರ್ 2ನೇ ಮತ್ತು ಂ 153ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ವಿಧಿಸೋಷಾದ ಅರ್ಥವಿವರಣೆಯು ನಿಬಂಧನೆಯು, ಪರಮೇಜಸ್ಟೀಯಾನೆ ಶ್ರೀಮರ್ ಮಹಾರಾಣಿಯವರೊಡನೆ ಸ್ನೇಹಭಾವವಲ್ಲಿರುವ ಇಂಡ್ಯೇತರದೊಳಗಣ ಅರಸುಗಳ ರಾಜ್ಯಗಳಲ್ಲಿಯೂ ಸೀಮೆಗಳಲ್ಲಿಯೂ ಇರತಕ್ಕ ಬ್ರಿಟಿಷ್ ಪ್ರಜೆಗಳಿಗೆ ಕಬ್ಜತಃ ಲಗಾವಾಗುವಂಥಾ, ಮತ್ತು ಆಕಾರಣದಿಂದಲೂ ಅಷ್ಟರಮಟ್ಟಿಗೂ ಬ್ರಿಟಿಷ್ ಲೆಜಿಸ್ಲೇಚರಿನ ಅಧಿಕಾರ ಧರ್ಮದ ದೆಶೆಯಿಂದ ಮೈಸೂರು ಸೀಮೆಯಲ್ಲಿ ಕಾನೂನಿನ ಬಲವನ್ನುಂಟಾಗಿರುವಂಥಾ ಬ್ರಿಟಿಷ್ ಲೆಜಿಸ್ಲೇಚರಿನ ಆಕ್ಟುಗಳ ಭಾಗಗಳಿಗೆ ಅನ್ವಯಿಸತಕ್ಕದ್ದಲ್ಲವೆಂದು ಶ್ರೀಮರ್ ಮಹಾರಾಜರವರು ತಿಳಿಸುತ್ತಾರೆ.

ಶ್ರೀಮರ್ ಮಹಾರಾಜರವರು ಮತ್ತು ಹುಕ್ಕುಂ ಕೊಡುವದೇನಂದರೆ, ಮೇಲೆಕಂಡ 1881ನೇ ಇಸವಿ ಸೆಪ್ಟಂಬರ್ 2ನೇ ಮತ್ತು ಂ 153ನೇ ನಂಬರ್ ಇಸ್ತಿಹಾರ್‌ನಾಮೆಯು, 1868ನೇ ಇಸವಿಯ 1ನೇ ನಂಬರ್ ಜನರಲ್ ಕ್ಲಾಜಸ್ ಆಕ್ಟಿಗಾಗಲಿ 1872ನೇ ಇಸವಿಯ 19ನೇ ನಂಬರ್ ಆಕ್ಟಿನಿಂದ ತಿದ್ದುಪಡಿ ಆದ ಪ್ರಕಾರ ಇಂಡಿಯನ್ ಪಿನಲ್‌ಕೋಡಿನ 230ನೇ ಸೆಕ್ಷನಿಗಾಗಲಿ ಅಥವಾ 1870ನೇ ಇಸವಿಯ 23ನೇ ನಂಬರ್ ಇಂಡಿಯನ್ ಕಾಯಿನೇಜ್ ಆಕ್ಟಿಗಾಗಲಿ ಅನ್ವಯಿಸತಕ್ಕದ್ದಲ್ಲವು.

ತಾರೀಖು 1ನೇ ಆಗಸ್ಟ್ 1885.

ನಂ. 94.—ರೆವಿನ್ಯೂ ವ ಜನರಲ್ ಇಲಾಖೆಗಳಲ್ಲಿ ದಿವಾನರವರ ಸೆಕ್ರಿಟರಿಯರಾದ ಮೆ|| ಆರ್. ವಿಜಯೀಂದ್ರರಾಯರವರು ಈ ದಿನ ಮಧ್ಯಾನ್ಹಾತ್ಪೂರ್ವ ಕೆಲಸದ ಮೇಲೆ ವಾಪಸು ಬಂದಿರುವದರಿಂದ, ಅವರ ರಜಾದ ಪೈಕೀ ಅವರಿಂದ ಉಪಯೋಗಿಸಲ್ಪಡದಿರುವ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 5ನೇ ಆಗಸ್ಟು 1885.

ನಂ. 95.—ಮದ್ದೂರು ಡಿಪ್ಯೂಟಿ ಅಮಲ್‌ದಾರ್ ಸೂರಪ್ಪನವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 18 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 96.—ಮೆಂಜ್ಯ ತಾಲ್ಲೂಕು ಅಮಲ್‌ದಾರ್ ಕೆ. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 97.—ಮೈಸೂರು ಅಮಲ್‌ದಾರ್ ಕೆ. ರಾಮಚಂದ್ರರಾಯರು, ಪಂಕಟನರಸಯ್ಯಂಗಾರ್ರು ರಜಾದ ಮೇಲೆ ಇರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, 5ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾಗಿ ಅಕ್ಟ್ಯು ಮಾಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 98.—ರೆವಿನ್ಯು ಸರ್ವೆ ಇಲಾಖೆಯಲ್ಲಿ ಕೆಲಸನೋಡುತ್ತಿರುವ ಅಮಲ್‌ದಾರ್ ಮೆ॥ ಹಬ್ಬ. ರಾಮಾನುಜಯ್ಯಂಗಾರ್ರು ರೆವಿನ್ಯು ಸರ್ವೆ 3ನೇ ಗ್ರೇಡ್ ಆ॥ ಸೂಪರ್‌ಟೆಂಡೆಂಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 6ನೇ ಆಗಸ್ಟು 1885.

ನಂ. 99.—ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಟಿ. ರಾಘವೇಂದ್ರರಾಯರಿಗೆ, 1885ನೇ ಇಸವಿ ಜೂನ್ 11ನೇ ಮುಕ್ತುಂ ಕ್ಯಾಂಪ್ ನಂಬರ್ 451ನೇ ಇನ್ಸ್ಪೆಕ್ಷನಾಮೆಯಲ್ಲಿ ಕೊಟ್ಟಿರ್ದ 3 ವಾರಗಳ ಪರೀಕ್ಷೆ ರಜಾ ಪ್ರಿವಿಲೀಜ್ ರಜಾವಾಗಿ ಬದಲಾಯಿಸಲ್ಪಟ್ಟು, 4 ದಿವಸಗಳ ವರಿಗೂ ಅಂದರೆ ಅವರು ಕೆಲಸದ ಮೇಲೆ ವಾಪಸು ಬಂದ ಜುಲೈ 8ನೇ ಮುಕ್ತುಂ ಮಧ್ಯಾಹ್ನಾತ್ಪೂರ್ವದ ವರಿಗೂ ಜಾಸ್ತಿಮಾಡಲ್ಪಟ್ಟಿರುತ್ತೆ.

ತಾರೀಖು 10ನೇ ಆಗಸ್ಟು 1885.

ನಂ. 100.—ದಿವಾನರವರ ಕಚ್ಚೇರಿಯಲ್ಲಿ ಹೆಡ್ ಸರ್ಕಿಷಿ ಮತ್ತು ಟ್ರಾನ್ಸ್ಲೇಟರಾದ ಬಿ. ಶ್ರೀನಿವಾಸರಾಯರು ಘನಸ್ಟ ಇಲಾಖೆಯಲ್ಲಿ ಅರ್ಸ್ಟಂಟ್‌ರಾಗಿ ಮೊಕರರ್ಮಾಡಲ್ಪಟ್ಟು, ಘನಸ್ಟ ಸೂಪರ್‌ಟೆಂಡೆಂಟರ ತಾಬೇಯಲ್ಲಿ ಕೆಲಸ ನೋಡುವ ಬ್ಯೆ ಮೈಸೂರು ಡಿಸ್ಟ್ರಿಕ್ಟ್‌ಗೆ ನಿಯಮಿಸಲ್ಪಟ್ಟಿರುತ್ತಾರೆ.

ನಂ. 101.—ಅಫಿಷಿಯೇಟಿಂಗ್ ಆ॥ ಕಮ್ಮಿಷನರ್ ಮೆ॥ ಕೆ. ರಾಮಚಂದ್ರರಾಯರು ದಿವಾನರವರ ಕಚೇರಿಯಲ್ಲಿ ಕೆಲಸ ನೋಡುವ ಬ್ಯೆ ನಿಯಮಿಸಲ್ಪಟ್ಟಿರುತ್ತಾರೆ.

2. ಮೆ॥ ಕೆ. ರಾಮಚಂದ್ರರಾಯರು 1885ನೇ ಇಸವಿ ಆಗಸ್ಟು 10ನೇ ಮುಕ್ತುಂನಲ್ಲಿ ದಿವಾನರವರ ಕಚೇರಿಯನ್ನು ಸೇರಿರುತ್ತಾರೆ.

ತಾರೀಖು 11ನೇ ಆಗಸ್ಟು 1885.

ನಂ. 102.—ಸಕಲ ಜನಗಳಿಗೂ ತಿಳಿಯುವ ಬ್ಯೆ ಇದರಿಂದ ಪ್ರಕಟನೆಲ್ಲಡುವದೇನಂದರೆ, (ಇದರಲ್ಲೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಲ್ಲೀ ಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ, ಜಹೀರಂಗವಾದ ಹರಾಜು ಮೂಲಕ ವಿಕ್ರಯ ಸಲ್ಲಡುವದು ಮತ್ತು ಸದರೀ ತಾರೀಖಿನಲ್ಲಿ ಬ್ಯೆ 11 ಘಂಟೆಗೆ ಹರಾಜು ಪ್ರಾರಂಭವಾಗಿ, ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಪ ವರಹಾಸ್ತು ದಾರರಿಗೆ ಹರಾಜೆ ನಿಲ್ಲುವದು.

2. ಪರಂತು, ಬಂದು ಗ್ರಾಮವು ಪೇರೆಪೇರೆಯಾಗಿ ಮೆಂಜ್ಯಾಗ್ಯಾಡಲ್ಪಟ್ಟ ವೃತ್ತೀಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀರ್ಜ ಆಫೀಸರರು ತಮ್ಮ ಯಿಚ್ಛಾನುಸಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಪೇರೆಪೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜೆ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿವಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪೂರ್ತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ವೇಖಿಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜ್ ಮುವೆಕೂಫ್ ಮಾಡಲ್ಪಡತಕ್ಕದ್ದು, ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡಿಸಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜ್ಞ ಆಫೀಸರವರಿಂದ ರುಜು ಮೊಹರ್ ಮಾಡೋಣಾವ ಬಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು; ತಪಸೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದ ಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಿಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಜಿಲ್ಲೆ. ತಾಲ್ಲೂಕು. ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾ ಜೀರೀಜು.	ಸಾಲಿಯಾನಾ ಸರಕಾರ್ಗಕ್ಕೆ ಕೊಡಬೇಕಾದ ಫ್ಯಿಟೆರೆಂಟಿ.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.				ಹರಾಜು ಜಾಲಿಯು ನಡೆದ ದಿನ.
			ಖ. ಕೂ. ಪ.	ರೂ. ಆ. ಪೈ	ರೂ. ಆ. ಪೈ.	ರೂ. ಆ. ಪೈ.				
ಕಡೂರು. ಹಾಸನ. ಹೊಳಬೆ.	ತಟ್ಟೀಕೆರೆ	ಕೃಷ್ಣಜೋಯಿಸ, ಇತರರು 23 ಮಂದಿ	57 17 14	186 9 7 ಲೋಕಲ್ ಸೆಸ್	172 0 0 11 10 7 183 10 7	21 15 6 109 8 0 89 5 5 59 1 2 27 13 5 307 11 6 2 0 0 93 3 1 128 4 1 531 2 8	ಪ್ರಮಾಥಿ ವಿಕ್ರಮ ವಿಷು ಚಿತ್ರಭಾನು ಸ್ವಭಾನು ನೋಟೀಸ್ ಫೀ ಬಡ್ಡೀ ಬಾಂದಲಾಗವಡ್ ಜುಮ್ಲಾ	1885ನೇ ಜನವರಿ ತಾ॥ 15ನೇ ಸೆಪ್ಟೆಂಬರ್ ತಾ॥ 15ನೇ ಮಾಸದ ಹಾಸನದ ಕಛೇರಿಯಲ್ಲಿ ಮ್ಯೂಸ್ಕಾ ಅನುವಿದ್ದಾರ ರೊಚರು.

ಎವೋಜೀಬ್ ಹುಕ್ಕುಂ,
ಆರ್. ವಿಜಯಸಿಂದ್ರರಾವ್,
ಸೆಕ್ರಟೇರಿ.